# ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಅಪರಾಧ ಮೊಕದ್ದಮೆ ಸಂಖ್ಯೆಃ ನಂಃ **2051/2025**

ಪಿರ್ಯಾದುದಾರರುಃ

ಕೃಷಿಕ್ ಸೌಹಾರ್ದ ಸಹಕಾರಿ ಸಂಘ ನಿಯಮಿತ,
ಆಶ್ರಯ ಆರ್ಕೇಡ್, 1 ನೇ ಮಹಡಿ,
ಮಾರ್ಕೆಟ್ ರಸ್ತೆ,
ಸಾಗರ ಟೌನ್,
ಇದರ ಪರ ಸಿ.ಇ.ಓ.,
ಸಮರ್ಥ ಎಂ.ಎಲ್,
8050150589.

-ವಿರುದ್ಧ-

ಆರೋಪಿಃ

ಇಮ್ತಿಯಾಜ್ ಬಾಷಾ ಬಿನ್
ಇದಾಯತ್ ಬಾಷಾ, ವಯಸ್ಕರು,
ಎಲ್.ಐ.ಸಿ ಕಛೇರಿ ಹತ್ತಿರ,
1 ನೇ ಕ್ರಾಸ್, ಜಿ.ಪಿ.ರಸ್ತೆ,
ಸಾಗರ ಟೌನ್.

## ಆಪಾದನೆ

ಪ್ರಧಾನ **ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,** ನ್ಯಾಯಾಧೀಶರಾದ ಶ್ರೀ ನಟರಾಜ್ ಯಾದವ್ ಎಸ್., ಎಂ.ಬಿ.ಎ., **ಎಲ್.ಎಲ್.ಬಿ., ಅದ ನಾನು ನಿಮ್ಮ ಮೇಲೆ ಈ ಕೆಳಗಿನಂತೆ** ಆಪಾದನೆ **ಹೊರಿಸುತ್ತೇನೆಃ**

ಆರೋಪಿಯಾದ ನೀವು **ಪಿರ್ಯಾದುದಾರರಿಂದ** ನಿಮ್ಮ ಗೃಹಕೃತ್ಯದ ಅಡಚಣೆಯನ್ನು ನಿವಾರಿಸಿಕೊಳ್ಳುವ ಸಲುವಾಗಿ ದಿನಾಂಕಃ19.03.2017 ರಂದು ರೂ.1,00,000-00(ಒಂದು ಲಕ್ಷ ರೂಪಾಯಿ)ಗಳನ್ನು ಸಾಲವನ್ನು ನಗದಾಗಿ ಪಡೆದಿರುತ್ತಾರೆ ಮತ್ತು ಸದರಿ ಸಾಲವನ್ನು ಬಡ್ಡಿಯೊಂದಿಗೆ ಹಿಂದಿರುಗಿಸಲು ಒಪ್ಪಿದ್ದು, ನಂತರ ನೀವು ಸದರಿ ಹಣವನ್ನು ಹಿಂದಿರುಗಿಸದೇ ಇದ್ದಾಗ ಪಿರ್ಯಾದುದಾರರು ಸಾಲದ ಹಣವನ್ನು

ಮರುಪಾವತಿಸುವಂತೆ ಪದೇ ಪದೇ ಕೇಳಿದಾಗ ಆರೋಪಿಯಾದ ನೀವು ಸಾಗರದ ಅಶೋಕ ರಸ್ತೆ ಶಾಖೆ ಆಕ್ಸಿಸ್ ಬ್ಯಾಂಕ್ ಗೆ ಸೇರಿದ ಚೆಕ್ ಸಂಖ್ಯೆಃ 052171 ಮೇಲೆ ರೂ.2,48,000-00(ಎರಡು ಲಕ್ಷ ನಲವತ್ತೆಂಟು ಸಾವಿರ)ಗಳನ್ನು ಅದೇ ದಿನ ಅಂದರೆ ದಿನಾಂಕಃ05.06.2024 ಎಂದು ನಮೂದಿಸಿದ ಪೋಸ್ಟ್ ಡೇಟೆಡ್ ಚೆಕ್ಕನ್ನು ಫಿರ್ಯಾದುದಾರರಿಗೆ ನಗದೀಕರಿಸುವಂತೆ ನೀಡಿದ್ದು, ಅದನ್ನು ಫಿರ್ಯಾದಿಯು ನಗಧೀಕರಣಕ್ಕಾಗಿ ದಿನಾಂಕಃ10.06.2024 ರಂದು ತಾನು ಖಾತೆ ಹೊಂದಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸಾಗರ ಶಾಖೆ ಮುಖಾಂತರ ನಗದೀಕರಿಸಲು ಸಲ್ಲಿಸಿದಾಗ, ಸದರಿ ಬ್ಯಾಂಕಿನವರು ದಿನಾಂಕಃ11.06.2024 ರಂದು (Account closed) ಎಂಬ ಷರಾದೊಂದಿಗೆ ಹಿಂಬರಹವನ್ನು ಮತ್ತು ಚೆಕ್ ನ್ನು ಫಿರ್ಯಾದುದಾರರಿಗೆ ವಾಪಸ್ಸು ನೀಡಿರುತ್ತಾರೆ, ನಂತರ ಅವರು ಈ ಬಗ್ಗೆ ಅವರ ವಕೀಲರ ಮೂಲಕ 15 ದಿನಗಳೊಳಗೆ ಸಾಲ ಮರುಪಾವತಿ ಮಾಡಬೇಕಾಗಿ ದಿನಾಂಕಃ03.07.2024 ರಂದು ಆರ್.ಪಿ.ಎ.ಡಿ. ಮೂಲಕ ನೋಟೀಸ್ ಕಳುಹಿಸಿದ್ದು, ಸದರಿ ನೋಟಿಸ್ Left without instructions ಎಂಬ ಷಾರಾದೊಂದಿಗೆ ಫಿರ್ಯಾದುದಾರರ ವಕೀಲರಿಗೆ ಹಿಂದಿರುಗಿರುತ್ತದೆ, ಆದರೂ ಸಹ ನೀವು ಸದ್ರಿ ಚೆಕ್‌ನಲ್ಲಿ ಹೇಳಿದ ಹಣವನ್ನು ಫಿರ್ಯಾದುದಾರರಿಗೆ ಮರುಪಾವತಿ ಮಾಡದೆ, ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಕಾಯಿದೆ ಸೆಕ್ಷನ್ 138ರ ಪ್ರಕಾರ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

ಪ್ರಶ್ನೆ.1. ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಅಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?

ಉತ್ತರಃ-

ಪ್ರಶ್ನೆ 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ನಿಮ್ಮದೇನಾದರೂ ಪ್ರತಿರಕ್ಷೆ ಇದೆಯಾ?

ಉತ್ತರಃ-

(ದಿನಾಂಕಃ 29.01.2026 ರಂದು ಆರೋಪಿಯಿಂದ ಮೇಲ್ಕಂಡ ಅಪಾದನೆ ನೀಡಲ್ಪಟ್ಟಿರುತ್ತದೆ ಎಂದು ದೃಡೀಕರಿಸಿದೆ).

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಾಗರ